ಬೆಸೆದು ಅವನ ಕೊರಳ ಬಿಸಿಯನ್ನು, ಅಂಗೈ ಬಿಸಿಯನ್ನೂ ಅನುಭವಿಸುತ್ತಾ ಬೆಣ್ಣೆಯಂತೆ ಕರಗುತಿದ್ದೆ. ಎಲ್ಲರೂ ಮಲಗಿದ ರಾತ್ರಿಯಲ್ಲಿ ನಮ್ಮ ಪ್ರೇಮ ನಿಗೂಢ ರಾತ್ರಿಯಲ್ಲಿ ಸದ್ದಿಲ್ಲದೆ ಅರಳಿ ಹೂವಾಗಿ ನಿಂತಿತ್ತು.

ಅವನು ಹೊರಟಿದ್ದ. ಉಳಿಸಿಕೊಳ್ಳುವಾಸೆಯಿದ್ದರೂ ಅವನು ಉಳಿಯಲಾರ ಎಂಬುದು ತಿಳಿದಿತ್ತು. ಏನ್ ಗೊತ್ತಾ? ಪ್ರೇಮ ಹೆಣ್ಣಿಗೆ ನಿಶೆ. ಗಂಡಿಗೆ ಅದೊಂದು ಕಡು ಎಚ್ಚರ. ದಾರಿಯಲ್ಲಿ ಹೋಗುವಾಗ ಫೋನ್ ಮಾಡಿ ಕೇಳಿದ.

''ಏನ್ ಮಾಡತಿದ್ದೀಯಾ?''

''ನೀನು ಎದ್ದು ಹೋದ ಕುರ್ಚಿಯಲ್ಲಿ ಕುಳಿತು ಈ ಕ್ಷಣಗಳನ್ನು ಅನುಭವಿಸುತ್ತಿದ್ದೇನೆ.''

''ನಡುರಾತ್ರಿ ದಾಟುತ್ತಿದೆ, ಬೆಳಿಗ್ಗೆ ಏಳಬೇಕಲ್ಲ. ಹೋಗಿ ಮಲಗು.''

''ಆಯ್ತು. ಒಳಗೆ ಏನೇನೋ ಅನ್ನಿಸ್ತಿದೆ, ಇಂದಿನವರೆಗೂ ಅನ್ನಿಸಿದ ಒಂದು ಅನ್ನಿಸಿಕೆ ಹೇಳಲಾ?''

''ಹೇಳು, ನಿತ್ಯ ನಿನ್ನ ಹಿಡಿಂಬೆಯಂಥ ಆರ್ಭಟನೇ ತಡಕೋತೀನಂತೆ. ಇಷ್ಟು ನಯವಾಗಿ ಹೇಳಿದ್ದನ್ನ ಕೇಳಲ್ವಾ?''

''ಏನಿಲ್ಲ ಕಣೋ... ನಿನ್ನ ಹೆಂಡತಿ ನೋಯ್ಬೋ ಹಣೆಬರಹ ಆಯ್ತಲ್ಲ ನಂದು ಅನ್ನಿಸ್ತು.''

''ಇದು ಗೊತ್ತಾದ್ರೆ, ನಿನ್ನ ಕುಟುಂಬ ನೋಯಲ್ವಾ? ನಿನ್ನಪ್ಪನ ನೆನಪು ಬರುತ್ತೆ ನಂಗೆ. ಹೀಗೆ... ಯಾರದೋ ನೋವಿನ ಎಳೆಯ ಜೊತೆಗೆ ನಮ್ಮ ಸಂತೋಷದ ಎಳೆಗಳು ಹೆಣೆದುಕೊಂಡಿರುತ್ತೆ. ಸಮಾಜದ ಸಿಕ್ಕು ಇದು. ಬೆಳಿಗ್ಗೆ ಮಾತಾಡಣ. ಈಗ ಮಲಗು. ಒಳ ಹೋಗು. ಜೋಪಾನ. ಜೋಪಾನ'' ಎಂದು ಎಚ್ಚರಿಸಿದ ಅವನ ಮಾತಿಗೆ ನಕ್ಕು ಮುತ್ತಿಟ್ಟು, ಫೋನಿಟ್ಟಿದ್ದೆ. ನಮ್ಮನೆಯಿಂದ ಅವನ ಮನೆಗೆ ಸರಿ ರಾತ್ರಿಯಲ್ಲೂ ಒಂದು ಗಂಟೆಯ ಹಾದಿ.

''ಈಗ ಅನ್ನಿಸುತ್ತೆ ಹೇಮೂ, ಅವನ 'ಜೋಪಾನ' ಅನ್ನುವ ಕಾಳಜಿಯ ಮಾತಲ್ಲಿ, ಅವನು ಇದ್ದುಹೋದ ಕ್ಷಣಗಳನ್ನು ಎಚ್ಚರದಿಂದ ಕಾಪಾಡಿಕೊಳ್ಳುವ ಗುಣವೂ ಇತ್ತೇನೋ... ಎಂದು. ಗಂಡಿಗೆ ಪ್ರೇಮ ಬೇಡವೆಂದಿರುವುದಿಲ್ಲ. ಆದರೆ ಅದು ಸಿಕ್ಕಾಗದಂತೆ, ರೇಷ್ಮೆಯ ನವಿರಾಗಿರುವಂತೆ, ಅದು ತಾನಾಗಿಯೇ ಹುಡುಕಿ ಬರುವಂತೆ, ಅವನನ್ನು ಕಾಳಜಿಯಿಂದ ಕಾದು ನಿಲ್ಲುವಂತೆ, ಹಾಗೇ ಅವನಲ್ಲಿ ಹೊಸ ಹುಮ್ಮಸ್ಸು ಯಾವಾಗಲೂ ತಾಂಡವಾಡುತ್ತಿರುವಂತೆ ಇರಬೇಕು. ಆದರೆ, ನಮಗೂ ಒಂದು ಬದುಕಿದೆ ಅನ್ನುವುದು ಅವರಿಗೆ ತಿಳಿಯಬೇಕಲ್ಲ. ಅದಕ್ಕಾಗಿ ನನ್ನ ಹೊಡೆದಾಟವಿರುತ್ತದೆ. ಅದೂ ಇವನಂಥವನು! ನಿನಗೆ ಗೊತ್ತಲ್ಲ... ಅವನು ಎಂಥ ಸೂಕ್ಷ್ಮ! ಅಂಥವನು ಟಿಪಿಕಲ್ ಗಂಡಸಿನಂತೆ...

ಇತ್ತೀಚೆಗೆ ಅವನಿಗೆ ಅವನ ಹೆಂಡತಿ ಮಕ್ಕಳ ಧ್ಯಾನ. ನನ್ನ ಕಡೆ ಗಮನ ಕಡಿಮೆ ಆಗಿದೆ. ನನಗೊತ್ತು! ಅವನು ಯಾವುದೇ ಒಂದು ಸಣ್ಣ ಕೆಲಸವಾದರೂ ಗಮನ ಇಟ್ಟು ಮಾಡ್ತಾನೆ. ಆದ್ರೆ ನನಗೆ ಅಂತ ಅವನ ಬಳಿ ಟೈಮೇ ಇರಲ್ಲ. ಕೊನೆ ಮಾರ್ಜಿನ್‌ನ ವೇಳೆ ಏನಾದರೂ ಸಿಕ್ಕರೆ, ಅದೂ ಎಲ್ಲಾ ಅನುಕೂಲಕ್ಕೆ ಬಂದರೆ, ನಾನು ಆ ಕ್ಷಣವನ್ನು ಉತ್ಕಟತೆಯಿಂದ ಒದಗಿಸಿಕೊಟ್ಟರೆ, ಜಗಳ ಮಾಡದಿದ್ದರೆ... ಇದು ಹೀಗೇನಾ?... ಬೇಡ ಅಂತಿಲ್ಲ.

ಕರೆದರೆ ಓಡೋಡಿ ಬರುತಿದ್ದವನು ಈಗ ಮೈಯೆಲ್ಲ ಎಚ್ಚರವಾಗುತ್ತಾನೆ. ಬಂದಾಗ ನಂಬಿಕೆ ಹುಟ್ಟಿದರೂ... ಅವನಾಗೇ ನನ್ನನ್ನು ಯಾವತ್ತೂ ಕರೆದಿಲ್ಲ. ಕರೆಯುವುದೂ ಇಲ್ಲ ಎಂಬುದು ನೆನಪಾಗುತ್ತದೆ. ನನ್ನ ಮೇಲೆ ಅಪನಂಬಿಕೆಯಾ? ನಾನಾಗೇ ಕರೆದರೂ ಅರೆಗಳಿಗೆಯ